**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-244/2023**

ಪಿ.ಡಬ್ಲ್ಯೂಃ- 3

ಸಿ.ಡಬ್ಲ್ಯೂಃ- 7

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ನಿರ್ಮಲಾ ದೊರೈಸ್ವಾಮಿ |
| ತಂದೆಯ ಹೆಸರುಃ | : | ದೊರೈಸ್ವಾಮಿ |
| ವಯಸ್ಸುಃ | : | 63 ವರ್ಷ |
| ವೃತ್ತಿಃ | : | ನಿವೃತ್ತ ವೈದ್ಯಾಧಿಕಾರಿ |
| ವಾಸಃ | : | ಹಾಸನ. |

**ದಿನಾಂಕಃ 25.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2006 ಜೂನ್ ರಿಂದ ಸೆಪ್ಟಂಬರ್ 2023 ರವರೆಗೆ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 07.07.2021 ರಂದು ಚಾಸಾ-10 ಡಬ್ಲ್ಯೂಪಿಸಿ ಅಶ್ವಿನಿಯವರು ಚಾಸಾ-1 ರವರನ್ನು ಕರೆತಂದಿದ್ದು, ಆಕೆಯು ಜಗದೀಶ ಎಂಬಾತನೊಂದಿಗೆ 12 ವರ್ಷಗಳ ಕಾಲ ಜೊತೆಗೆ ಇದ್ದು, ಬಳಿಕ ಐದು ತಿಂಗಳಿಂದ ಆಕೆಯನ್ನು ಒಬ್ಬಂಟಿಯನ್ನಾಗಿ ಬಿಟ್ಟು ಹೋಗಿದ್ದು, ಕಾರಣ ಚಾಸಾ-1 ರವರು ನೀಡಿದ ದೂರಿನ ಮೇರೆಗೆ ಪೊಲೀಸರು ಆಕೆಯನ್ನು ವೈದ್ಯಕೀಯ ತಪಾಸಣೆಗೆ ಕರೆದುಕೊಂಡು

ಬಂದಿರುತ್ತಾರೆ. ಆಕೆಯನ್ನು ತಪಾಸಣೆ ಮಾಡಿದಾಗ ಸದರಿ ಚಾಸಾ-1 ರವರು ದೈಹಿಕ ಸಂಪರ್ಕಕ್ಕೆ ಒಳಗಾಗಿರುತ್ತದೆ ಎಂದು ಕಂಡು ಬಂದಿದ್ದು, ಅದರಂತೆ ನಾನು ವೈದ್ಯಕೀಯ ತಪಾಸಣೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆ ಹಾಗೂ ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-13ಕ್ಕೆ, ಸಾಕ್ಷಿಯ ಸಹಿಯನ್ನು ನಿಪಿ-13(ಎ)ಗೆ ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

3. ಚಾಸಾ-1 ರವರನ್ನು ಯಾವುದೇ ಪೊಲೀಸ್ ಅಧಿಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಿಲ್ಲ, ನಾನು ವೈದ್ಯಕೀಯ ತಪಾಸಣೆಗೆ ಒಳಪಡಿಸದೇ ಇದ್ದರೂ ಸಹ ನಿಪಿ-13 ಸುಳ್ಳು ತಪಾಸಣಾ ವರದಿಯನ್ನು ಚಾಸಾ-1 ರವರ ಜೊತೆ ಶರೀಕಾಗಿ ಪೊಲೀಸರ ಮಾತು ಕೇಳಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.